ಶ್ರೀ ಪಿ. ರಾಮದೇವ್.—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಅರ್ಥಮಂತ್ರಿಗಳು ತಂದಿರತಕ್ಕಂತಹ ಈ ಟ್ಯಾಕ್ಸೇಷನ್ ಬಿಲ್ಲನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಕೇವಲ ೨೫ ಕೋಟಿ ರೂಪಾಯಿಗಳ ತೆರಿಗೆಯನ್ನು ಬರುವಂತಹ ಒಂದು ಟ್ಯಾಕ್ಸೇಷನ್ ಬಿಲ್ಲನ್ನು ನಮ್ಮ ಮಾನ್ಯ ಅರ್ಥಮಂತ್ರಿಗಳಾದ ಶ್ರೀಮಾನ್ ವಿ ರಪ್ಪಮೊಯ್ಲಿಯವರು ತಂದಿದ್ದಾರೆ. ಇದು ರಾಜ್ಯಕ್ಕೆ ದೊಡ್ಡ ಹೊರೆಯಲ್ಲವೆಂದು ನಮ್ಮ ಮಾನ್ಯ ಮಿತ್ರರು ಮಾತನಾಡುವಾಗ ಹೇಳಿದರು. ಸರ್ಕಾರ ಈ ಒಂದು ಟ್ಯಾಕ್ಸೇಷನ್ ಸ್ವಲ್ಪ ಟೈಟ್ ಮಾಡಿದರೆ ೪೦ಡಿತವಾಗಿ ಬಾರದೇ ಬರುತ್ತದೆ. ನಮ್ಮ ಮಾನ್ಯ ಅರ್ಥಮಂತ್ರಿಗಳು ನಾನು ಇಡೀ ದೇಶದಲ್ಲಿಯೇ ರೇಕಾರ್ಡ್ ಆಗಬೇಕು, ಒಳ್ಳೆಯ ಹೆಸರನ್ನು ತೆಗೆದುಕೊಳ್ಳಬೇಕೆಂದು ಬಹಳ ಪ್ರಯತ್ನ ಮಾಡುತ್ತಿದ್ದಾರೆ. ಮತ್ತು ಅವರು ಬಹಳ ಕೊಚ್ಚಿಕೊಳ್ಳುತ್ತಿದ್ದಾರೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಸುಪ್ರೀಂ ಕೋರ್ಟಿನ ಒಂದು ತೀರ್ಮಾನದ ಪ್ರಕಾರ ಪಶ್ಚಿಮ ಬಂಗಾಳದಲ್ಲಿ ಚುನಾವಣೆಯಾಗಬೇಕೆಂದು ತೀರ್ಮಾನವಾಗಿದೆ. ಆದ್ದರಿಂದ ಕರ್ನಾಟಕ ರಾಜ್ಯದಲ್ಲಿಯೂ ಕೂಡ ಚುನಾವಣೆಯಾಗುತ್ತದೆ ಎಂಬುದು ನಮಗೆ ಖಚಿತವಾಗಿದೆ. ಮತ್ತೇ ಚುನಾವಣೆಯಾದರೂ ಸಹ ತಾವು ಹಣಕಾಸು ಮಂತ್ರಿಗಳಾಗಿ ಬರಬೇಕೆನ್ನುವ ದೃಷ್ಟಿಯಿಂದ ಈ ಮಾತನ್ನು ನಾನು ಹೇಳುತ್ತಿದ್ದೇನೆ. ಆದ್ದರಿಂದ ತಾವು ಈ ಬಿಲ್ಲನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ಅಧ್ಯಕ್ಷರೇ ಕರ್ನಾಟಕ ರಾಜ್ಯದಲ್ಲಿ ಚುನಾವಣೆಯಾದರೆ ಎಲ್ಲರು ಚುನಾವಣೆಗೆ ಹೋಗಬೇಕಾಗುತ್ತದೆ. ಆದರೆ ಮಾನ್ಯ ಸದಸ್ಯರ ಗತಿ ಏನು ಎಂಬುದನ್ನು ಅವರು ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಪಿ. ರಾಂದೇವ್—ಮಳ್ಳೂರು ಆನಂದರಾಯರೇ ಮತ್ತೆ ತಾವು ರಾಜಾಜಿನಗರದಿಂದ ಸ್ಪರ್ಧಿಸಿ ಗೆದ್ದು ಬರುವುದಕ್ಕೆ ಆಗುವುದಿಲ್ಲ. ನಾವು ೪೦ಡಿತವಾಗಿ ಮತ್ತೆ ಸ್ಪರ್ಧಿಸಿ ಗೆದ್ದು ಚುನಾಯಿತರಾಗಿ ಬಂದೇ ಬರುತ್ತೇವೆ. ಇದರಲ್ಲಿ ಯಾವ ಅನುಮಾನ ತಮಗೆ ಬೇಡ. ಈ ಮನರಂಜನೆ ತೆರಿಗೆಯನ್ನು ಏನು ನಮ್ಮ ಮಾನ್ಯ ಅರ್ಥಮಂತ್ರಿಗಳು ಹಾಕಿದ್ದಾರೆ. ಸಿನಿಮಾ ನೋಡುವವರ ಮೇಲೆ, ನಾಟಕ ನೋಡುವವರ ಮೇಲೆ, ಸಾಮಾನ್ಯವಾಗಿ ಸಿನಿಮಾ ಮತ್ತು ನಾಟಕಗಳನ್ನು ನೋಡುವವರು ಯಾರು ಯುವಕರು, ವಿದ್ಯಾರ್ಥಿಗಳು, ಬಡಜನರು, ಇವರ ಮೇಲೆ ನೀವು ಈ ಮನರಂಜನೆ ತೆರಿಗೆಯನ್ನು ಹಾಕುತ್ತಿದ್ದೀರಿ. ಅದೂ ತಾವು ಕನ್ನಡ ಚಲನ ಚಿತ್ರಗಳ ಮೇಲೆ ಹೆಚ್ಚಾಗಿ ಈ ಮನರಂಜನೆ ತೆರಿಗೆಯನ್ನು ಹಾಕುತ್ತಿದ್ದೀರಿ. ನಮ್ಮ ಬೆಂಗಳೂರು ನಗರದಲ್ಲಿ ಹೆಚ್ಚಾಗಿ ತಮಿಳು ಚಿತ್ರಗಳು ಹಿಂದೀ ಚಿತ್ರಗಳು ಹಾಗೂ ಮಲಯಾಳಿ ಚಿತ್ರಗಳು ಪ್ರದರ್ಶನವಾಗುತ್ತಿವೆ. ಈ ಚಿತ್ರಗಳ ಮೇಲೆ ಬೇಕಾದರೆ ತಾವು ಒಂದಕ್ಕೆ ಡಬ್ಬಲ್ ಮನರಂಜನೆಯ ಟ್ಯಾಕ್ಸನ್ನು ಹಾಕಿ ಬೇಡ ಎಂದು ನಾನು ಹೇಳುವುದಿಲ್ಲ. ಆದರೆ ಕನ್ನಡ ಚಲನ ಚಿತ್ರಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು ೭೬ ಕನ್ನಡ ಚಿತ್ರಗಳನ್ನು ತೆಗೆದರು. ಇದರಲ್ಲಿ ಸುಮಾರು ೩೪-೩೫ ಚಿತ್ರಗಳು ಮಾತ್ರ ಪ್ರದರ್ಶನವಾಗುತ್ತಿವೆ. ಉಳಿದ ಎಲ್ಲಾ ಚಿತ್ರಗಳು ಬಾಕ್ಸ್ ಆಫೀಸಿನಲ್ಲಿ ಬಾಕ್ಸಿನಲ್ಲಿ ಕೊಳೆಯುತ್ತಾ ಬಿದ್ದಿವೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ಮನರಂಜನೆಯ ತೆರಿಗೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಇನ್ನೂ ನಮ್ಮ ಬೆಂಗಳೂರು ನಗರದಲ್ಲಿ ಕ್ಯಾಬರೆ ಮಂತ್ರ ಬ್ಲೂ ಫಿಲಂಗಳು ನಡೆಯಬಾರದು ಎಂದು ಕಾನೂನು ಇದ್ದರೂ ಸಹ ನಡೆಸುತ್ತಿದ್ದಾರೆ. ಇದು

ತುಂಬಾ ಇಲ್ಲೀಗಲ್. ಇವರ ಮೇಲೆ ಟೀಕಾದರೆ ೧೦೦ಕ್ಕೆ ೧೦೦ರಷ್ಟು ತೆರಿಗೆಯನ್ನು ಹಾಕಿ ಬೇಡವೆಂದು ನಾನು ಹೇಳುವುದಿಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ನಾನು ಬ್ಲೂ ಫಿಲಂನ್ನು ನೋಡಿಲ್ಲ. ಮಾನ್ಯ ಸದಸ್ಯರಾದಂತಹ ರಾಮ್‌ದೇವ್‌ರವರು ಬ್ಲೂ ಫಿಲಂನ್ನು ನೋಡಿದ್ದಾರೆಯೇ ?

ಶ್ರೀ ಪಿ. ರಾಮ್‌ದೇವ್.—ಮಾನ್ಯ ಅಧ್ಯಕ್ಷರೇ ಶ್ರೀಮಾನ್ ಗರುಡಾಚಾರ್‌ರವರು ಪೋಲೀಸ್ ಕಮಿಷನರ್ ಆಗಿದ್ದಾಗ ಒಂದು ಕಡೆ ಬ್ಲೂ ಫಿಲಂನ್ನು ನಡೆಸುತ್ತಿದ್ದರು ಆಗ ಅವರು ನನ್ನನ್ನು ಕರೆದು ಕೊಂಡು ಹೋಗಿ ಈ ಬ್ಲೂ ಫಿಲಂನ್ನು ನಡೆಸುತ್ತಿದ್ದವರನ್ನು ಹಿಡಿದಾಗ ನಾನು ಸಹ ನೋಡಿದ್ದೇನೆ.

ಅವರು ತೋರಿಸಿದ ಮೇಲೆ ನೋಡದೇ ಇರುವುದಕ್ಕೆ ಆಗುತ್ತದೆಯೇ. ಆಮೇಲೆ ಟೂರಿಂಗ್ ಟಾಕೀಸ್ ಇದೆಯೆಲ್ಲಾ ಅದರಲ್ಲಿ ಚಾರ್ಜ್ ಸ್ಕೇಲ್‌ನಲ್ಲಿ ಇವೇಷನ್ ಆಫ್ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಆಗುತ್ತಾ ಇದೆ. ಅಧಿಕಾರಿಗಳು ಮತ್ತು ಟಾಕೀಸ್ ಮಾಲೀಕರು ಇಬ್ಬರೂ ಸೇರಿಕೊಂಡು ಅದನ್ನು ನಡೆಸುತ್ತಾ ಇದ್ದಾರೆ. ಅದನ್ನು ವಿಶೇಷವಾಗಿ ಹಿಡಿದರೆ ಅದರಿಂದ ಹತ್ತಾರು ಕೋಟಿ ರೂಪಾಯಿ ಬರುವುದಕ್ಕೆ ಸಾಧ್ಯವಿದೆ, ಆದುದರಿಂದ ಅಲ್ಲಿ ಟೈಟನ್ ಮಾಡಬೇಕು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಈ ಸಿನಿಮಾಗೆ ಟ್ಯಾಕ್ಸ್ ಜಾಸ್ತಿ ಹಾಕಿರತಕ್ಕಂಥಾ ಕೆಲಸವನ್ನು ಸರ್ಕಾರ ಮಾಡಿದೆ. ಆದರೆ ಅಲ್ಲಿ ಏನೂ ಸೌಕರ್ಯ ಇಲ್ಲ. ತಾವು ಸಿನಿಮಾಕ್ಕೆ ಹೋಗುತ್ತೀರೋ ಇಲ್ಲವೋ ಗೊತ್ತಿಲ್ಲ. ನಾನು ಅನೇಕ ಸಾರಿ ಹೋಗಿದ್ದೇನೆ ಥಿಯೇಟರಿನಲ್ಲಿ ಏರ್‌ಕಂಡಿಷನ್ ಚಾಲೂ ಮಾಡುವುದಿಲ್ಲ, ಸೀಟ್ಸ್‌ನಲ್ಲಿ ಒಬ್ಬರ ಮೇಲೊಬ್ಬರು ಕುಳಿತುಕೊಳ್ಳಬೇಕು, ಆ ರೀತಿ ಸೀಟ್ಸ್ ಇರುತ್ತದೆ, ಸೀಟ್ಸ್ ಬಹಳ ಹತ್ತಿರದಲ್ಲಿರುತ್ತವೆ. ಆಮೇಲೆ ಸಿನಿಮಾಟೋಗ್ರಫಿ ರೂಲ್ಸ್ ಏನಿದೆ ಆ ರೂಲ್ಸನ್ನು ಯಾರೂ ಫಾಲೋ ಮಾಡುವುದಿಲ್ಲ, ಮತ್ತೆ ಕಾರ್ ಪಾರ್ಕಿಗೆ ಎಂದು ಕೊಟ್ಟಿದ್ದೀರಿ, ಅಲ್ಲಿ ಒಂದು ಮಿನಿ ಥಿಯೇಟರ್ ಕಟ್ಟಿಸುತ್ತಾರೆ. ಈ ರೀತಿ ಲಾರ್ಜ್ ಸ್ಕೇಲ್‌ನಲ್ಲಿ ವಯೆಲೇಷನ್ ಆಗುತ್ತಿದೆ, ಇದನ್ನು ಯಾರು ನೋಡುವವರು. ನೀವು ಟ್ಯಾಕ್ಸ್ ಜಾಸ್ತಿ ಮಾಡುತ್ತೀರಿ, ನಮ್ಮ ಕೈಯಿಂದ ದೋಚುತ್ತೀರಿ, ಸಿನಿಮಾ ನೋಡತಕ್ಕವರು ನಾವೂ ನೀವೂ ಸಹ. ಆದರೆ ಸರಿಯಾದ ಸೌಕರ್ಯ ಕೊಡತಕ್ಕಂಥಾದ್ದರ ಕಡೆ ಗಮನಕೊಡಬೇಕು. ಮತ್ತೆ ಅಲ್ಲಿ ಫುಡ್ ಕಂಪಲ್ಸರಿ, ಗೇಟ್ ಹಾಕಿರುತ್ತಾರೆ ಹೊರಗಡೆ ಕಾಫಿ ಒಂದು ರೂಪಾಯಿ ಆದರೆ ಅಲ್ಲಿ ಮೂರು ರೂಪಾಯಿ ಕಾಫಿಗೆ ಕೊಡಬೇಕು, ತಿಂಡಿಯನ್ನು ಹೆಚ್ಚು ಬೆಲೆಗೆ ಕೊಂಡುಕೊಳ್ಳಬೇಕು, ಇದನ್ನು ಸ್ವಲ್ಪ ಬಿಗಿಮಾಡಿ. ತೆರಿಗೆ ಹಾಕುವುದು ದೊಡ್ಡದಲ್ಲ. ತೆರಿಗೆ ಜೊತೆಯಲ್ಲಿ ಜನಗಳಿಗೆ ಹೆಚ್ಚಿನ ಸೌಕರ್ಯ ಕೊಡುವುದರ ಕಡೆ ಗಮನಕೊಡಬೇಕು ಎಂದು ನಾನು ಇನ್ನೊಮ್ಮೆ ಒತ್ತಾಯಮಾಡುತ್ತೇನೆ.

ಇನ್ನು ಕೋರ್ಟ್ ಫೀ ತೆಗೆದು ಹಾಕುವುದು ಒಳ್ಳೆಯದು. ಕೋರ್ಟ್ ಫೀ ಜಾಸ್ತಿ ಮಾಡಿರುವುದು ಸರಿಯಲ್ಲ. ಲಿಟಿಗಂಟ್ ಪಬ್ಲಿಕ್ ನಾವೂ ನೀವೂ ಹೋಗುತ್ತೇವೆ. ನಾನು ಎರಡು ಮೂರು ಕೇಸ್ ಹಾಕಿದ್ದೇನೆ, ನಾನು ಯಾವ ಲಾಯರ್‌ಗೂ ಫೀಸ್ ಕೊಟ್ಟಿಲ್ಲ, ಕೊಡುವುದಕ್ಕಾಗುವುದಿಲ್ಲ ; ಕೋರ್ಟ್ ಫೀಯಂತೂ ಕೊಡಲೇಬೇಕು. ಆದ್ದರಿಂದ ದಯವಿಟ್ಟು ಇದನ್ನು ತೆಗದುಹಾಕಬೇಕು, ಚುನಾವಣಾ ವರ್ಷದಲ್ಲಿ ಜನಸಾಮಾನ್ಯರಿಗೆ ಅನುಕೂಲ ಮಾಡಿಕೊಡಬೇಕು ಎಂದು ನಾನು ತಮ್ಮಲ್ಲಿ ಇನ್ನೊಮ್ಮೆ ಪ್ರಾರ್ಥಿಸಿಕೊಳ್ಳುತ್ತಾ ಇದ್ದೇನೆ.

ಶ್ರೀ ಜೆ. ಹೆಚ್. ಪಟೇಲ್ (ಚೆನ್ನಗಿರಿ)—ಸನ್ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಸನ್ಮಾನ್ಯ ಸದಸ್ಯರು ಹೇಳಿದ ವಿಷಯಗಳನ್ನು ನಾನು ಹೇಳುವುದಿಲ್ಲ. ಈ ಮನರಂಜನೆ ತೆರಿಗೆ ಬಗ್ಗೆ ನನ್ನದು ಒಂದು ಅಭಿಪ್ರಾಯ ಇದೆ. ಈ ತೆರಿಗೆಯನ್ನು ವಿನಾಕಾರಣ ಜಾಸ್ತಿ ಮಾಡಿದ್ದೀರಿ. ಈಗಾಗಲೇ ಇದಕ್ಕೆ ಕಾರಣ ಗಳನ್ನು ಹೇಳಿದ್ದಾರೆ. ಜನಸಾಮಾನ್ಯರಿಗೆ ಅದು ಒಂದೇಒಂದು ಮನರಂಜನೆ ಮಾಡತಕ್ಕಂಥ ಅವಧಾನ. ಆದುದರಿಂದ ಮನರಂಜನೆ ತೆರಿಗೆಯನ್ನು ಕಡಿಮೆ ಮಾಡುವುದು ಒಂದು. ಇನ್ನೊಂದು ಏನೆಂದರೆ, ಈಗ ನಾವು ನೋಡುತ್ತಾ ಇರುವಹಾಗೆ ಬೆಂಗಳೂರು ನಗರದಲ್ಲಿ ಬೆಳಗ್ಗಿನಿಂದ ಹಿಡಿದು, ಬೆಳಗಿನ ಜಾವ ರಾತ್ರಿ, ಒಂದು ಗಂಟೆವರೆಗೆ ಬಹಳಷ್ಟು ಜನ ಸಿನಿಮಾ ಥಿಯೇಟರ್ ಸುತ್ತಮುತ್ತ ಇರುತ್ತಾರೆ. ಇದು ವೇಸ್ಟ್ ಆಫ್ ಮ್ಯಾನ್ ಪವರ್, ಇದನ್ನು ಲೆಕ್ಕ ಹಾಕಿದರೆ ಬಹುಶಃ ಯಾವ ರಾಜ್ಯದಲ್ಲಾಗಲೀ ಯಾವ ರಾಷ್ಟ್ರದಲ್ಲಾಗಲೀ ಈ ರೀತಿ ಕ್ರಿಮಿನಲ್ ವೇಸ್ಟ್ ಆಫ್ ಮ್ಯಾನ್ ಪವರ್ ಆಗುತ್ತಾ ಇಲ್ಲ. ಅದಕ್ಕೋಸ್ಕರ ಹೊಸಗಳು ಏನಿದ್ದಾವೆ ಅದರ ಕಡೆ ಗಮನಕೊಡಬೇಕು. ಮೊದಲನೆಯದು, ಶನಿವಾರ ಅಥವಾ ಭಾನುವಾರ ರಜಾ ದಿವಸಗಳಲ್ಲಿ ಮಾತ್ರ ಮಾರ್ನಿಂಗ್ ಷೋ, ಆಫ್ಟರ್‌ನೂನ್ ಷೋ, ಮ್ಯಾಟಿನಿ ಇವೆಲ್ಲಾ ಇರುತ್ತಿತ್ತು

ಮೊದಲನೆಯದಾಗಿ ನಿರುದ್ಯೋಗಿಗಳಿಗೆ ಬೇರೆ ಪರ್ಯಾಯ ವ್ಯವಸ್ಥೆ ಮಾಡಿಲ್ಲ. ಕೆಲಸ ಏನೂ ಇಲ್ಲದೇ ಇದ್ದರೂ ಸಿನಿಮಾ ಥಿಯೇಟರ್ ಮುಂದೆ ಕ್ಯೂ ನಿಂತುಕೊಂಡಿರುವುದನ್ನು ತಾವೂ ನೋಡಿದ್ದೀರಿ, ಲಕ್ಷಾಂತರ ಜನ ಕ್ಯೂ ನಿಂತಿರುತ್ತಾರೆ. ಬೆಳಿಗ್ಗೆ ೧೦ ಗಂಟೆಗೆ ಟಿಫಿನ್ ಕ್ಯಾರಿಯರ್ ತೆಗೆದುಕೊಂಡು ಹೋಗಿ, ಕ್ಯೂ ನಿಂತುಕೊಂಡು ಟಿಕೆಟ್ ತೆಗೆದುಕೊಳ್ಳುತ್ತಾರೆ. ಇದು ಯಾವುದೇ ಆರೋಗ್ಯಕರವಾದಂಥ ಸಮಾಜದ ಲಕ್ಷಣವಲ್ಲ. ಆದುದರಿಂದ ಷೋಗಳನ್ನು ಕಡಿಮೆಮಾಡಿ. ಮಾರ್ನಿಂಗ್ ಷೊ, ಆಫ್ಟರ್ ನೂನ್ ಷೋ ಇರುವುದು ಅಂದರೆ, ಎಲ್ಲೋ ಫ್ಯಾನ್ಸ್‌ನಲ್ಲೋ, ಸ್ವೀಡನ್‌ನಲ್ಲೋ ಅವರಿಗೆ ಆರಾಮ ಇರುತ್ತದೆ, ದುಡ್ಡು ಇರುತ್ತದೆ, ಯಾವಾಗ ಬೇಕಾದರೂ ಸಿನಿಮಾ ನೋಡಿಕೊಂಡು ಕಳಿತುಕೊಳ್ಳುತ್ತಾರ ಆದರೆ ಹೊಟ್ಟೆಗೆ ಅನ್ನ ಇಲ್ಲದೇ ಇರತಕ್ಕವರು ಬೆಳಿಗ್ಗೆ ೧೦ ಗಂಟೆಗೆ ಟಿಫಿನ್ ಕ್ಯಾರಿಯರ್ ತೆಗೆದುಕೊಂಡು ಹೋಗಿ ಸಿನಿಮಾ ಥಿಯೇಟರ್ ಹತ್ತಿರ ಕ್ಯೂ ನಿಂತುಕೊಳ್ಳುವುದನ್ನು ಏನಾದರೂಮಾಡಿ ಹದ್ದುಬಸ್ತಿಗೆ ತರಬೇಕು. ಸಿನಿಮಾ ನೋಡುವುದಕ್ಕೆ ಬೆಳಿಗ್ಗೆ ೧೦ ಗಂಟೆಗೆ ಹೆಂಗಸರು ಮಕ್ಕಳು ಟಿಫಿನ್ ಕ್ಯಾರಿಯರ್ ನಲ್ಲಿ ಊಟ ತೆಗೆದುಕೊಂಡುಹೋಗಿ, ಟಿಕೆಟ್ ತೆಗೆದುಕೊಳ್ಳುವುದಕ್ಕೆ ಕ್ಯೂ ನಿಂತುಕೊಳ್ಳುತ್ತಾರೆ. ಇದು ಎಷ್ಟು ವೇಸ್ಟ್ ಆಫ್ ಮ್ಯಾನ್ ಪವರ್ ಆಗುತ್ತದೆ. ಇದನ್ನು ಹತೋಟಿಗೆ ತರಬೇಕು. ಇನ್ನೊಂದು ವಿಷಯವೇನೆಂದರೆ, ಈ ಮನರಂಜನೆ ಏನಿದೆ ಇದರ ಬಗ್ಗೆ ತಾವು ಬಹುಶಃ ಬೇರೆ ದೇಶಗಳಲ್ಲಿ ನೋಡಿದ್ದೀರಿ ಎಂದು ಕಾಣುತ್ತದೆ. ಶ್ರೀಸಾಮಾನ್ಯ ಜನರಿಗೆ ಅವರು ಹಣ ಕೊಡದೆ ಕೆಲವು ಹಳೆಯ ಸಾಂಸ್ಕೃತಿಕ ದೃಷ್ಯಗಳನ್ನು ತೋರಿಸುತ್ತಾರೆ. ಆ ರೀತಿ ಹಳೆಯ ಸಾಂಸ್ಕೃತಿಕ ದೃಷ್ಯಗಳನ್ನು ಕಬ್ಬನ್‌ಪಾರ್ಕ್ ಅಥವಾ ಲಾಲ್‌ಬಾಗಿನಲ್ಲಿ ಸರ್ಕಾರದ ಖರ್ಚಿನಲ್ಲಿ ಬೇಕಾದರೆ ತೋರಿಸತಕ್ಕ ಏರ್ಪಾಡುಮಾಡಿ. ಸಾಮಾನ್ಯ ಜನರು ಹಣಕಾಸು ಇಲ್ಲದೇ ಇರುವವರು ಇದರ ಪ್ರಯೋಜನ ಪಡೆಯುತ್ತಾರೆ. ಜನರಿಗೆ ಕ್ರಿಮಿನಲ್ ಟ್ರೇಡ್ ನಲ್ಲಿರಬೇಕು, ಅಥವಾ ಅವರ ಮನಸ್ಸಿಗೆ ತೃಪ್ತಿಯಾಗತಕ್ಕಂಥ ಮನಸ್ಸನ್ನು ಎಂಗೇಜ್ ಮಾಡತಕ್ಕ ವ್ಯವಸ್ಥೆ ಇರಬೇಕು. ಈಗ ಸರ್ಕಾರದ ಪತಿಯಿಂದ ಟ್ಯಾಕ್ಸ್‌ಗಳನ್ನು ವಸೂಲು ಮಾಡುತ್ತಾ ಇದ್ದೀರಿ, ಅದೇ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್‌ಗಳನ್ನು ಉಪಯೋಗಿಸಿಕೊಂಡು ಏನೂ ಗತಿಯಿಲ್ಲದೇ ಇರತಕ್ಕವರಿಗೆ ಒಂದು ಪರ್ಯಾಯ ವ್ಯವಸ್ಥೆ ಮಾಡಿ, ಹಿಂದೆ ಕಬ್ಬನ್‌ಪಾರ್ಕಿನಲ್ಲಿ ಮಂ್ಯಾಸಿಕ್ ಇರುತ್ತಿತ್ತು. ಇಲ್ಲಿ ಏನಾದರೂ ಬೇರೆ ಅವರ ಮನಸ್ಸಿಗೆ ತೃಪ್ತಿಯಾಗುವಂತೆ ವ್ಯವಸ್ಥೆ ಮಾಡಬೇಕು. ಜನರು ಇವತ್ತು ಕೆಡುತ್ತಾ ಇದ್ದಾರೆ. ಸಿನಿಮಾ ಇವತ್ತು ಒಂದು ಬಹಳ ದೊಡ್ಡ ಮಾಧ್ಯಮ, ಜನರ ಮನಸ್ಸನ್ನು ರೂಪಿಸತಕ್ಕ ಬಹಳ ದೊಡ್ಡ ಮಾಧ್ಯಮ. ಆ ದೊಡ್ಡ ಮಾಧ್ಯಮವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕು. ಸಿನಿಮಾದಲ್ಲಿರುವಷ್ಟು ಹಣ ಯಾವ ಉದ್ಯಮದಲ್ಲೂ ಇಲ್ಲ. ಅದಕ್ಕೋಸ್ಕರ ಬೇರೆ ಎಲ್ಲಾ ಪ್ರಯತ್ನಮಾಡಿ ಕೊನೆಗೆ ಸಿನಿಮಾಕ್ಕೆ ಹೋಗುತ್ತಾರೆ, ಕೆಲವರು ಸಿನಿಮಾದಲ್ಲಿ ಹಣಮಾಡಿ ರಾಜಕೀಯಕ್ಕೆ ವಾಪಸ್ ಬರುವುದಕ್ಕೆ ಶುರುಮಾಡಿದ್ದಾರೆ. ಅದು ಒಂದು ಆಮೇಲೆ ಇಲ್ಲಿ ಮರ, ಬೀಟಿ ಮರ, ಗಂಧದ ಮರ ಎಂದು ಹೇಳಿದ್ದೀರಿ. ಗಂಧದಮರ, ಬೀಟಿ ಮರಕ್ಕೆ ಬೆಲೆ ಜಾಸ್ತಿಯಾಯಿತು. ಆದರೆ ಮರಕ್ಕೆ ನೀವು ಏಕೆ ಜಾಸ್ತಿಮಾಡಬೇಕು. ಜನಸಾಮಾನ್ಯರು ಮರವನ್ನು ಹೇಗೆ ಉಪಯೋಗಿಸ ಬೇಕು ಮರ ಅಂದರೆ ಡಿಫೈನ್ ಮಾಡುವುದು ಬಹಳ ಕಷ್ಟವಾಗುತ್ತದ. ಗಂಧದಮರ, ಬೀಟೇಮರದ ಜೊತೆಗೆ ಮರವನ್ನು ಸೇರಿಸುವುದು ಸಾಧುವಲ್ಲ. ಆಮೇಲೆ ಪ್ರೈವೇಟ್ ಬಸ್‌ಗಳಲ್ಲಿ ಪ್ಯಾಸೆಂಜರ್ ಟ್ಯಾಕ್ಸ್ ಜಾಸ್ತಿಮಾಡಿದ್ದಾರೆ. ಸರ್ಕಾರ ೧೮ ರೂಪಾಯಿ ಚಾರ್ಜ್ ಮಾಡುವ ಕಡೆ ಖಾಸಗಿ ಬಸ್ಸಿನ ಮಾಲೀಕ.....

ಶ್ರೀ ಎಂ. ವೀರಪ್ಪ ಮೊಯ್ಲಿ.—ಆ ಬಿಲ್ಲು ಇನ್ನೂ ಬರಬೇಕು.

ಶ್ರೀ ಜೆ. ಹೆಚ್. ಪಟೇಲ್.—ಈಗ ಸಾಹುಕಾರಿ ಬಸ್‌ನವರು ಕಡಿಮೆ ದರದಲ್ಲಿ ಇನ್ನೂ ವೇಗವಾಗಿ, ಹೆಚ್ಚು ಸೌಲತ್ತಿನಿಂದ ಜನರನ್ನು ಕರೆದುಕೊಂಡು ಹೋಗುವುದನ್ನು ನೋಡಿ ಹೊಟ್ಟೆ ಕಿಚ್ಚುಪಟ್ಟುಕೊಳ್ಳು ತ್ತೀರೇ ಹೊರತು ನಿಮ್ಮ ಮುರುಕು ಬಸ್ ಗುರಿ ತಲುಪದೆ ಇರುತ್ತದೆ. ಮಾನ್ಯ ಅಧ್ಯಕ್ಷರೆ, ಅಲ್ಲಿ ಬೋರ್ಡ್ ಹಾಕಿದ್ದಾರೆ, ಏನೆಂದರೆ, ನಿಲುಗಡೆ ರಹಿತ ಬಸ್ ಎಂದು. ನಿಲುಗಡೆ ರಹಿತ ಅಂದರೆ ನಾನ್ ಸ್ಟಾಪ್ ಎಂದು. ಅದು ಇಲ್ಲಿಂದ ಮೈಸೂರಿಗೇ ಹೋಗಿ ನಿಲ್ಲುವುದು, ಅದು ಮೈಸೂರಿನಲ್ಲೂ ನಿಲ್ಲುವುದಿಲ್ಲ. ಏಕೆಂದರೆ, ಅದು ನಾನ್‌ಸ್ಟಾಪ್, ಹೋಗುತ್ತಾ ಇರುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದ್ಯೋಜಾತಪ್ಪನವರಿಗೆ ಕ್ರೆಡಿಟ್ ಕೊಡುತ್ತಾ ಇದ್ದೀರಿ, ಆದರೆ ನಾವು ಕಳಿತಂಥ ಬಸ್ ಹೊರಡಲೇ ಇಲ್ಲ.

ಶ್ರೀ ಜೆ. ಹೆಚ್. ಪಟೇಲ್ —ಇದರಲ್ಲಿ ಎರಡು ಗುಣಗಳಿವೆ. ಹೊರಡುವುದಿಲ್ಲ, ಹೊರಟುಮೇಲೆ ನಿಲ್ಲುವುದಿಲ್ಲ ; ಮಾನ್ಯ ಜಾತಪ್ಪನವರ ಬಸ್ ಇದರಲ್ಲಿ ಎರಡು ವಿಚಾರ ಇದೆ. ಖಾಸಗಿ ಬಸ್‌ನವರಿಗೂ ಹೋಗಿ ಅವರ ಮೇಲೂ ಟ್ಯಾಕ್ಸ್ ಹಾಕಿ ಅದನ್ನೂ ದುಬಾರಿ ಮಾಡುವುದಕ್ಕೆ ಹೊರಟಿದ್ದೀರಿ, ನೀವಾದರೂ ಮಾಡುವಹಾಗಿಲ್ಲ. ಬೇರೆಯವರಿಗೂ ಮಾಡುವುದಕ್ಕೆ ಬಿಡುತ್ತಾ ಇಲ್ಲ. ಕೆ ಎಸ್ ಆರ್.ಟಿ ಸಿ ಯನ್ನು ನೀವಾದರೂ ಕೈಬಿಡಿ. ಯಾರಾದರೂ ನಡೆಸತಕ್ಕವರಿಗಾದರೂ ಕೊಡಿ. ಟಾಟಾ ಬಿರ್ಲಾರವರಿಗಾದರೂ ಕೊಡಿ. ಹಿಂದೆ ಏರ್ ಇಂಡಿಯಾಗೆ ಟಾಟಾ ಬಂಡವಾಳ ಹಾಕಿರಲಿಲ್ಲ. ಮ್ಯಾನೇಜ್‌ಮೆಂಟ್ ಮಾಡುವುದಕ್ಕೆ ಬಿಟ್ಟಿದ್ದರು ಅವರನ್ನು. ಅದು ಮಾನ್ಯ ಮಾಜಿ ಮಂತ್ರಿಗಳಿಗೆ ಗೊತ್ತು. ಟಾಟಾ ಮ್ಯಾನೇಜ್‌ಮೆಂಟ್ ಮಾಡಿದಾಗ ಏರ್ ಇಂಡಿಯಾ ನಿಜವಾಗಿ ಲುಕ್ಸಾನ್ ಇದ್ದದ್ದು ಲಾಭಕ್ಕೆ ಬಂತು. ಆದುದರಿಂದ ಕೆ.ಎಸ್.ಆರ್.ಟಿ.ಸಿ.ಯನ್ನು ನಡೆಸುವಂಥ ಪ್ರಣ್ಯಾತ್ಮರಿಗೆ ಕೊಡಿ. ಖಾಸಗಿಯವರು ಕಡಿಮೆ ದುಡ್ಡಿನಲ್ಲಿ ತೆಗೆದುಕೊಂಡು ಹೋಗುತ್ತಾರೆ. ಅಂಥಾದ್ದು ಅವರ ಮೇಲೆ ಟ್ಯಾಕ್ಸ್ ಹಾಕಿ, ತಾನೂ ಮಾಡ, ಬೇರೆಯವರಿಗೂ ಮಾಡುವುದಕ್ಕೆ ಬಿಡುವುದಿಲ್ಲ ಅಂದ ಹಾಗೆ ಆಯಿತು, ಅದು ಅಲ್ಲ. ಇದೇ ತರಹ ಇನ್ನೊಂದು ವಿಷಯ ಇದೆ. ತಂಬಾಕು ಸಾಮಾನ್ಯ ಜನ ಉಪಯೋಗಿಸತಕ್ಕ ವಸ್ತು. ನಾವು ೬ ವರ್ಷಗಳ ಕೆಳಗೆ ೨೦ ಪೈಸೆಗೆ ಒಂದು ಕಟ್ ಬೀಡಿ ತೆಗೆದುಕೊಂಡು ಸೇದುತ್ತಿದ್ದೆವು. ಪ್ರತಿ ವರ್ಷ ಹೀಗೆ ೨೦ ಪೈಸೆ ಏರಿಸಿಕೊಳ್ಳುತ್ತಾ ಇದೆ ಈಗ ಒಂದು ರೂಪಾಯಿ ಕೊಟ್ಟರೆ ಒಂದು ಕಟ್ ಗಣೇಶ ಬೀಡಿ, ಒಂದು ಪೆಂಕಿಪೊಟ್ಟಣ ಸಿಕ್ಕುವುದಿಲ್ಲ. ಸಾಮಾನ್ಯ ಜನ ಉಪಯೋಗಿಸತಕ್ಕ ವಸ್ತುಗಳ ಬೆಲೆಗಳನ್ನು ಏರಿಸಿದರೆ ಹೇಗೆ. ತಾವು ಇದಕ್ಕೆ ಆಲ್ಟರ್‌ನೇಟೀವ್ ಏನು ಎಂದು ಕೇಳಬಹುದು. ಇದಕ್ಕೆ ಆಲ್ಟರ್‌ನೇಟೀವ್ ನಾನು ಒಂದೇ ಒಂದು ಸಜೆಸ್ಟ್ ಮಾಡುತ್ತೇನೆ.

೫-೦೦ ಪಿ. ಎಂ.

ಎಕ್ಸ್‌ಪೆಂಡೀಚರ್ ಟ್ಯಾಕ್ಸ್‌ಗೆ ಹಿಂದೇ ನಾನು ಕೇಂದ್ರ ಸರ್ಕಾರಕ್ಕೆ ಒಂದು ಸಲಹೆ ಮಾಡಿದ್ದೆ. ಏತಕ್ಕೆಂದರೆ ಇದನ್ನು ಕೇಂದ್ರ ಸರ್ಕಾರದವರು ಮಾಡಬೇಕಾಗುತ್ತದೆ ತಾವು ಮಾಡುವುದಕ್ಕೆ ಬರುವುದಿಲ್ಲ. ಎಕ್ಸ್‌ಪೆಂಡೀಚರ್ ಟ್ಯಾಕ್ಸ್ ಹಾಕಬೇಕಾದರೆ ಅದಕ್ಕೆ ೬೦೦ ರೂಪಾಯಿ ಸಂಬಳ ಬರತಕ್ಕ ಮನುಷ್ಯ ೧ ತಿಂಗಳಿಗೆ ಕಣ್ಣಿಗೆ ಕಾಣುವ ಹಾಗೆಯೇ ೧ ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಾನೆ. ಅವನು ತಾನು ಸರ್ಕಾರಕ್ಕೆ ಕೊಡಬೇಕಾದರೆ ಇನ್‌ಕಂ ಟ್ಯಾಕ್ಸ್‌ನ್ನು ಕೊಟ್ಟಿದ್ದೇನೆಂದು ಹೇಳಿಬಿಟ್ಟು, ತನಗಿಷ್ಟು ಬಂದಷ್ಟು ಖರ್ಚು ಮಾಡುತ್ತಿದ್ದಾನೆ, ಈ ವ್ಯವಸ್ಥೆ ಇರುವುದರಿಂದಲೇ ನಮ್ಮ ಆರ್ಥ ಶಾಸ್ತ್ರಜ್ಞರು ಹೇಳುವ ಪ್ರಕಾರ ೧ ವರ್ಷಕ್ಕೆ ೨೫೦೦, ೩೦೦೦ ಕೋಟಿ ರೂ.ಗಳ ಟ್ಯಾಕ್ಸ್ ಎವೇಡ್ ಆಗುತ್ತಿದೆ ಎಂದು ಹೇಳುತ್ತಿದ್ದಾರೆ. ಅವನು ಒಂದು ಸಾರಿ ಟ್ಯಾಕ್ಸ್ ಕೊಟ್ಟು ರಶೀದಿ ತೆಗೆದುಕೊಂಡರೆ ಅವನಿಗೆ ೨, ೩ ಸಾವಿರ ಸಂಬಳ ಬರುತ್ತಿದ್ದರೆ ಅವನು ತಿಂಗಳಿಗೆ ೬ ಸಾವಿರ ರೂ.ಗಳನ್ನು ಖರ್ಚು ಮಾಡುತ್ತಿರುತ್ತಾನೆ. ಆಮ ಎಲ್ಲರ ಕಣ್ಣಿಗೆ ಕಾಣುವ ಹಾಗೇ ಖರ್ಚು ಮಾಡುತ್ತಿರುತ್ತಾನೆ. ಅವನನ್ನು ಹಿಡಿಯುವುದಕ್ಕೆ ಹೋದರೆ, ಅಧಿಕಾರಿಗಳು ಚಾಪೆ ಕೆಳಗೆ ನುಸುಳಿದರೆ ಇವನು ರಂಗೋಲೆ ಕೆಳಗೇ ನುಸುಳುತ್ತಾನೆ. ನೀವು ಏನು ಮಾಡಿದರೂ ತೆರಿಗೆ ಕಳ್ಳರೇನಿದ್ದಾರೆ ಅವನನ್ನು ಹಿಡಿಯುವುದಕ್ಕಾಗುವುದಿಲ್ಲ. ಹೀಗಾಗಿರುವುದರಿಂದಲೇ ಅವನು ಮರ್ಸಿಡಿಸ್ ಕಾರ್, ಬೆಂಜ್ ಕಾರ್‌ಗಳಲ್ಲಿ ಓಡಾಡುತ್ತಿರುವುದು ಇಲ್ಲದಿದ್ದರೆ ಎಲ್ಲಿಂದ ಬರಬೇಕು? ಇದಕ್ಕೆ ನೀವು ಏನಾದರೂ ಒಂದು ಕಾನೂನನ್ನು ಮಾಡದೇ ಹೋದರೆ ಈ ದೇಶದಲ್ಲಿ ಸಂಪತ್ತಿನ ವಿತರಣೆ ಏನಿವೆ ಅದು ಅದ್ವಾನವಾಗಿ ಹೋಗುತ್ತದೆ ಅದನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ. ಇದನ್ನು ನಾವು ರಾಜ್ಯ ಸರ್ಕಾರದವರು ಮಾಡುವುದಕ್ಕಾಗುವುದಿಲ್ಲ ಕೇಂದ್ರ ಸರ್ಕಾರದವರು ಮಾಡಬೇಕು ಎಂದು ಹೇಳತಕ್ಕದ್ದನ್ನು ಒಪ್ಪುತ್ತೇನೆ. ಆದರೆ ನಿಮ್ಮ ರಾಜ್ಯದಲ್ಲಿರತಕ್ಕವರು ಯಾರುಯಾರು ಎಷ್ಟೆಷ್ಟು ಖರ್ಚು ಮಾಡುತ್ತಾರೆ ಎನ್ನತಕ್ಕದರ ಮೇಲೆ ನಿಗಾ ಹಾಕುವುದು ಬಿಟ್ಟು ಯಾರು ರಸ್ತೆಯಲ್ಲಿ ಓಡಾಡುತ್ತಾರೆ, ಯಾರು ಖಾಸಗಿ ಬಸ್‌ಗಳಲ್ಲಿ ಓಡಾಡುತ್ತಾರೆ, ಯಾರು ಸಿನಿಮಾ ಥಿಯೇಟರಿನ ಮುಂದೆ ಕ್ಯೂ ನಿಂತಿರುತ್ತಾರೆ, ಅಂಥವರ ಮೇಲೆ ಟ್ಯಾಕ್ಸ್ ಹಾಕುವುದಕ್ಕೆ ಹೊರಟಿದ್ದೀರಿ. ಆದೇ ಯಾರು ದೊಡ್ಡ ದೊಡ್ಡವರು ಅಶೋಕ ಹೋಟೆಲ್‌ನಲ್ಲಿ, ವಸಂತ ನಗರದಲ್ಲಿರುವವರನ್ನು ಕೈಬಿಟ್ಟಿದ್ದೀರಿ. ಅವರ ತಂಟೆಗೇ ಹೋಗಿಲ್ಲ. ಬಡವರ ಮೇಲೆ ಮಾತ್ರ ಏತಕ್ಕೆ ಸ್ಟ್ರಾಮಿ ? ಇವತ್ತು ನಿಮಗೆ ಮಾಡುವುದಕ್ಕೆ ಶಕ್ತಿ ಇದೆ ಆದರೆ ಮಾಡುವುದಕ್ಕೆ ಮನಸ್ಸಿಲ್ಲ. ಆದುದರಿಂದ ನಾನು ಕೊಟ್ಟಿರತಕ್ಕ ೨-೩ ಸಲಹೆಗಳನ್ನಾದರೂ ಪರಿಗಣಿಸಿ ಮತ್ತೆ ಪುನರ್ ಆಲೋಚನೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಲಕ್ಷ್ಮೀಸಾಗರ್ ರವರು ಎವೇಷನ್ ಮತ್ತು ಅರಿಯರ್ಸ್ ಬಗ್ಗೆ ಸಾಕಷ್ಟು ಗಮನವನ್ನು ಕೊಟ್ಟು ಪ್ರಸ್ತಾಪಿಸಿದರು. ನಾನು ಮೊನ್ನೆ ೨ ಸಾರಿ ಈ ವಿಚಾರದ ಬಗ್ಗೆ ಪ್ರಸ್ತಾಪ ಬಂದಾಗ ಇದರ ಬಗ್ಗೆ ಸಾಕಷ್ಟು ವಿವರಗಳನ್ನು ಸದನಕ್ಕೆ ಒಪ್ಪಿಸಿದ್ದೆ. ಈ ಅರಿಯರ್ಸ್ ಕಾಣುವ ಮಟ್ಟಿಗೆ ಳಳ.೯೬ ಕೋಟಿ ರೂ.ಗಳು ಇದ್ದರೂ ಕೂಡ ಅದರಲ್ಲಿ ೧೦.೫೩ ಕೋಟಿ ರೂ.ಗಳು ಸ್ಟೇ ಆರ್ಡರ್‌ನಿಂದ ಕವರ್ ಆಗಿದೆ. ಸ್ಟೇ ಆರ್ಡರ್ ಇದೆ. ಇದರಲ್ಲಿ ಈಗಾಗಲೇ ೨.೭೬ ಕೋಟಿ ಇಂಟ್ರೆಸ್ಟ್ ಫ್ರೀ ಲೋನ್, ಇನ್‌ಸೆಂಟಿವ್ ಸ್ಕೀಂ ೧೩ ಲಕ್ಷ. ಕಲೆಕ್ಟಬಲ್ ಅರಿಯರ್ಸ್ ಳಳ.೭೬ ಕೋಟಿಗಳಲ್ಲಿ ೧೬.೮೩ ಕಲೆಕ್ಟಬಲ್ ಅರಿಯರ್ಸ್ ಎಂದು ಇರುವುದು. ಇದರಲ್ಲಿ ೩೦ ಪರ್ಸೆಂಟ್ ಕಲೆಕ್ಟ್ ಮಾಡಬೇಕೆಂದು ಈಗಾಗಲೇ

SRI A. LAKSHMISAGAR.—Is it entire arrears ?

SRI M. VEERAPPA MOILY.—I am referring to only sales tax. ಇದರಲ್ಲಿ ೩೦ ಪರ್ಸೆಂಟ್ ಕಲೆಕ್ಟ್ ಮಾಡಬೇಕೆಂದು ನಾವು ನಿರ್ಣಯ ತೆಗೆದುಕೊಂಡು ಅದರ ಪ್ರಕಾರ ನಾವು ಸಾಕಷ್ಟು ಕ್ರಮವನ್ನು ತೆಗೆದುಕೊಂಡಿದ್ದೇವೆ. ಏಪ್ರಿಲ್ ೧೯೮೧ ರಿಂದ ಸೆಪ್ಟೆಂಬರ್ ೮೧ರ ವರೆಗೆ ನಾವು ೫ ೩೮ ಕೋಟಿ ರೂ ಗಳನ್ನು ನಾವು ಕಲೆಕ್ಟ್ ಮಾಡಿದ್ದೇವೆ. ಆ ಮೇಲಿನದು ಡಿಟೇಲ್ಸ್ ನನ್ನ ಹತ್ತಿರವಿಲ್ಲ. ಔಟ್ ಸ್ಟ್ಯಾಂಡಿಂಗ್ ಅರಿಯರ್ಸ್ ೩೦ ಪರ್ಸೆಂಟ್ ಕಲೆಕ್ಟ್ ಮಾಡತಕ್ಕ ಗುರಿಯನ್ನಿಟ್ಟುಕೊಂಡಿದ್ದೇವೆ ಮತ್ತು ಅದಕ್ಕಾಗಿ ನಾವು ವಿಶೇಷವಾದ ಕಾರ್ಯಕ್ರಮವನ್ನು ಸಹ ಕೈಗೊಳ್ಳುತ್ತಿದ್ದೇವೆ. ಮತ್ತೆ ಎವೇಜನ್ ಒಂದಲ್ಲ ಒಂದು ಸಂದರ್ಭ ಬಂದಾಗ ಎವೇಜನನ್ನು ಕಡಿಮೆ ಮಾಡುವುದಕ್ಕೆ ಎಷ್ಟರಮಟ್ಟಿಗೆ ಕಾರ್ಯಕ್ರಮವನ್ನು ತೆಗೆದುಕೊಂಡು ಯ ಶಸ್ವಿಯಾಗಿದ್ದೇವೆ ಎನ್ನುವುದನ್ನು ಕೂಡ ಅರದಿಯಲ್ಲಿ ನಾವು ಈಗಾಗಲೇ ಕೊಟ್ಟಿದ್ದೇವೆ.

SRI A. LAKSHMISAGAR.—I want to apply your mind to the quantum of arrears to be collected during the years 1980-81 and 1981-82 and in that context what will be the total arrears that should be collected. Even according to your own figures it will not be less than Rs. 20 crores.

SRI M. VEERAPPA MOILY.—Apart from sales tax, ನಾನು ರಿಪ್ಲೈ ಕೊಡುವಾಗ ಕೂಡ ಹೇಳಿದೆ ೮ ಕೋಟಿ ರೂ.ಗಳನ್ನು ನಾವು ಇದರಲ್ಲಿ ವಸೂಲಿ ಮಾಡಿದ್ದೇವೆ. This is also unparalleled in the History of this State. ಇನ್ನು ಎಂಟ್ರಿ ಟ್ಯಾಕ್ಸನ್ನು ೧ ರಿಂದ ೨ ಪರ್ಸೆಂಟ್ ಹಾಕುವುದರಿಂದ ಗ್ರೇಡ್ ಡೈವರ್ಟ್ ಆಗುತ್ತದೆಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಈ ವಿಚಾರವನ್ನು ನಾವು ಪ್ರೊಫೆಸರ್ ಗುಲಾತಿ ಸಮಿತಿಯ ಮುಂದಿಟ್ಟಿದ್ದೇವೆ. ಡೈವರ್ಷನ್ ಆಫ್ ಟ್ರೇಡ್ ಆಗದೇ ಇರುವ ಬಗ್ಗೆ ಯಾವ ರೀತಿಯ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿ ರೆಕಮೆಂಡೇಷನ್ ಮಾಡುತ್ತಾರೋ ಅದನ್ನು ಅನುಷ್ಠಾನಕ್ಕೆ ತರುವವರಿದ್ದೇವೆ. ಆದುದರಿಂದ ಅದನ್ನು ಸಹ ತಡೆಹಿಡಿಯುವುದಕ್ಕೆ ಸಾಧ್ಯತೆ ಇದೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅದರ ಕಾಪಿ ಕೊಡಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಆ ಸಮಿತಿಯಿಂದ ರಿಪೋರ್ಟ್ ಬಂದ ಕೂಡಲೇ ನಾವು ಎಲ್ಲಾ ಸದಸ್ಯರಿಗಳಿಗೂ ಒದಗಿಸಿ ಕೊಡುತ್ತೇವೆ. ಇನ್ನು ಪೇಪರ್—ಆಂಡ್ ಪೇಪರ್ ಪ್ರಾಡಕ್ಟ್ ಬಗ್ಗೆ ಹೇಳುವುದಾದರೆ ದುರ್ಬಲ ವರ್ಗದವರಿಗೆ ಪುಸ್ತಕಗಳನ್ನು ತೆಗೆದುಕೊಳ್ಳುವುದಕ್ಕೆ ಬಹಳ ತೊಂದರೆಯಾಗುತ್ತಿದೆ ಎನ್ನುವ ಬಗ್ಗೆ ಯೋಚನೆ ಮಾಡಿ ನಾವು ಲೇಖಿಕ್ ಪುಸ್ತಕಗಳನ್ನು ಪ್ರಿಂಟ್ ಮಾಡುತ್ತಿದ್ದೇವೆ ಅದಕ್ಕೆ ತೆರಿಗೆ ಕಾಯಿದೆಯಿಂದ ವಿನಾಯಿತಿ ಮಾಡಿಸುತ್ತಿದ್ದೇವೆ.

SRI A. LAKSHMISAGAR.—Lekhak note books are used only in Secondary Schools, of course in graduate class also. But what about other class of papers like loose sheets etc., used by the Student community ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಸ್ಟೂಡೆಂಟ್ಸ್ ಕಮ್ಯೂನಿಟಿಗೆ ಯಾವ ರೀತಿಯು ಹೆಚ್ಚಿಗೆ ಭಾರ ಬಾರದ ಹಾಗೆ ನಾವು ನೋಡುತ್ತೇವೆ.. We will look after that. That assurance I can give on the floor of this House. So far as the student community is concerned we will take care.

ಇನ್ನು ಕಾಯಲ್ ಟ್ಯಾಕ್ಸ್ ಬಗ್ಗೆ ತಾವು ಕೇಳಿದ್ದೀರಿ ಬಹುಶಃ We could have refunded lot of money which has already been collected. Because of the decision of the Supreme Court, ನಾವು ಹಾಕದೇ ಇದ್ದರೆ ಏಜಾನೆಯಿಂದ ಹಣವನ್ನು ಸಂರಿಂಬೇಕಾಗಿತ್ತು, in order to prevent that we have to put that tax.

ಇನ್ನು talls Shops and establishments, ಬಗ್ಗೆ ಹೇಳುವುದಾದರೆ, ಟೆಲ್ಸ್ ಬಂದಾಗ ನೋಡೋಣ. ಈಗಿನ ಟ್ಯಾಕ್ಸೇಷನ್ ಪ್ರಪೋಜಲ್‌ನಲ್ಲಿ ಟೆಲ್ಸ್ ಪ್ರಪೋಜಲ್ ಇಲ್ಲ. ಈಗ ಶಾಪ್ಸ್ ಮತ್ತು ಎಸ್ಟಾಬ್ಲಿಶ್‌ಮೆಂಟ್ ಬಗ್ಗೆ ಹೆಚ್ಚು ಕಡಿಮೆ ಪ್ರತಿವರ್ಷವೂ ರಿನ್ಯೂ ಮಾಡಿದರೆ ಹರ್ಯಾಸ್‌ಮೆಂಟ್ ಆಗುತ್ತದೆಂದು ಮಾನ್ಯ ಸದಸ್ಯರು ಹೇಳಿದರು. ಅದಕ್ಕೆ ನಮ್ಮ ಉದ್ದೇಶವಾವರೂ ಏನು ಎಂದರೆ ಇವರು ಒಮ್ಮೆ ರಿಜಿಸ್ಟ್ರೇಷನ್ ಮಾಡಿಕೊಂಡು ಹೊರಟು ಹೋದರೆ, after all they are the people who can afford to pay money...

SRI A. LAKSHMISAGAR.—At least once in Five years..

SRI M. VEERAPPA MOILY.—That proposal is not before us. We can think about it. You can also give some suggestion when the proposal comes before the House. Tols on national Highway ಆದುದರಿಂದ ಕೂಡ ಹಾಕುತ್ತಿದ್ದಾರೆ. ಇದನ್ನು ಕಲೆಕ್ಟ್ ಮಾಡುತ್ತಿದ್ದಾರೆ. ಪೇಮೆಂಟ್ ಇಲ್ಲವಾದುದರಿಂದ ಪಬ್ಲಿಕ್ ಪ್ಲೇಸ್‌ಗಳಲ್ಲಿ ಕಾರು, ಸೈಕಲ್, ಸ್ಕೂಟರ್ ಮುಂತಾದ ವಾಹನಗಳಿಗೆ ಟ್ಯಾಕ್ಸ್‌ನ್ನು ವಸೂಲಿ ಮಾಡುತ್ತಿದ್ದಾರೆ. ಮತ್ತೆ ಇಪತ್ತು ನ್ಯಾಶನಲ್ ಹೈವೇಗಳಲ್ಲಿ ಕೂಡ ಈ ಟೋಲ್ಸ್ ಟ್ಯಾಕ್ಸ್‌ನ್ನು ಹಾಕಿದ್ದಾರೆ. ಇದು ಏನು ನಾವು ಹೊಸದಾಗಿ ಎಕ್ಸ್‌ಪೆರಿಮೆಂಟಲ್ ಬೇಸಿಸ್ ಮೇಲೆ ತಂದಿರತಕ್ಕದ್ದು ಅಲ್ಲ. ಈ ಒಂದು ಲೆವಿ ನಮ್ಮ ದೇಶದಲ್ಲಿ ಹಿಂದೆ ಕೂಡ ಇದ್ದಂಥದ್ದು. ದೊಡ್ಡದೊಡ್ಡ ಬ್ರಿಡ್ಜ್‌ಗಳನ್ನು ಮಾಡಬೇಕೆಂದು ಹೊರಟಾಗ ಆದರಿಂದ ಸ್ವಲ್ಪ ಅಂಶವಾದರೂ ನಾವು ವಸೂಲಿ ಮಾಡುವುದಕ್ಕೆ ಪ್ರಯತ್ನ ಪಡದಿದ್ದರೆ ಮುಂದೆ ಬರತಕ್ಕ ಅನೇಕ ಬ್ರಿಡ್ಜ್‌ಗಳನ್ನು ಕಟ್ಟುವುದಕ್ಕೆ ಬಹಳ ಕಷ್ಟವಾಗುತ್ತದೆ. ಆದುದರಿಂದಲೇ ಈ ತೆರಿಗೆಯನ್ನು ಹಾಕಿದ್ದೇವೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಇದನ್ನು ಹಾಕುವಾಗ ದಿಪಸಕ್ಕೆ ಇಷ್ಟು ಎಂದು ಮಾಡಿದರೆ ಒಳ್ಳೆಯದು.

SRI. M. VEERAPPA MOILY.—After all it is a modest amount. ಕಾರು ತರುವಾಗ ಒಂದು ರೂಪಾಯಿ ವಸೂಲ್ಮಾಡುತ್ತಾರೆ. This I suppose nobody feels about it. ಇಲ್ಲಿ ದೊಡ್ಡ ದೊಡ್ಡ ಪ್ರಜೆಗಳಿಗೆ ಮಾತ್ರ ಟೋಲ್ ಹಾಕುತ್ತಿದ್ದೇವೆ. ಸಣ್ಣ ಸಣ್ಣ ಪ್ರಜೆಗಳಿಗೇನು ಹಾಕುತ್ತಿಲ್ಲ. It is quite a modest levy that we are putting. People will not pass through on a particular bridge a number of times.

SRI A. LAKSHMISAGAR.—Suppose on the National Highway there are three or four bridges and a lorry transporting materials has to pass through it, only once the toll should be collected. Otherwise, there will be gross harassment.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈಗ ಅದು ಇಲ್ಲ. When it comes we will take up some of these suggestions. ಇಡೀ ರಾಜ್ಯದಲ್ಲಿ ೨೦ ಪ್ರಜೆಗಳ ಮೇಲೆ ಮಾತ್ರ ಅದು ಇರುವುದು. ಈಗ ಆ ಪ್ರೊಪೋಸಲ್ ಕೂಡ ಇಲ್ಲ. ಒರಿಸ್ಸಾ, ಬಿಹಾರಾಷ್ಟ್ರದಲ್ಲಿ ಕೂಡ ಟೋಲ್

ಹಾಕಿದ್ದಾರೆ. ಇನ್ನು 'ಕೋರ್ಟ್ ಫೀಜ್' ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದರು. After all the pinch is only to the extent of Rs. 5 lakhs ತಾವು, ಕನ್‌ಸಲ್ಟೇಟೀವ ಕಮಿಟಿಯ ಬಗ್ಗೆ ಹೇಳಿದ್ದೀರಿ, ಆ ಬಗ್ಗೆ ಬೇರೆ ಬೇರೆ ರಾಜ್ಯಗಳ ಸಲಹೆಗಳನ್ನು ಕೇಳಿದ್ದೇವೆ. ಯಾವ ರಾಜ್ಯಗಳು ಕೂಡ ಅದಕ್ಕೆ ಒಪ್ಪಲಿಲ್ಲ.

SRI A. LAKSHMISAGAR.—Don't enhance it.

SRI M. VEERAPPA MOILY.—Government of Tamil Nadu has gone on increasing it. After all in the administration of justice ಅಂಥ ಪರಿಣಾಮ ಬೀರುವುದಿಲ್ಲ. We are not increasing it though the Tamil Nadu Government has increased the Court fee. ಆದುದರಿಂದ ಯಾವ ರಾಜ್ಯ ಸರ್ಕಾರ ಕೂಡ ಕನ್‌ಸಲ್ಟೇಟೀವ್ ಕಮಿಟಿಯವರು ಏನು ಸಲಹೆ ಮಾಡಿದ್ದಾರೆ ಆ ಪ್ರೊಪೋಸಲ್ಲಿಗೆ ಒಪ್ಪಿಲ್ಲ. ಆದಕ್ಕೆ ಬದಲಾಗಿ ತಮಿಳ್ನಾಡು ಸರ್ಕಾರದವರು ಇನ್ನೂ ಜಾಸ್ತಿ ಮಾಡಿದ್ದಾರೆ. ಕೇಂದ್ರ ಸರ್ಕಾರ ಕೂಡ ಅಬಾಲಿಷ್ ಮಾಡಬೇಕೆಂದು ನಿರ್ಣಯ ತೆಗೆದುಕೊಂಡಿಲ್ಲ. It is only a proposal from the Consultative Committee. ಇನ್ನು ಮನರಂಜನ ತೆರಿಗೆಯ ಬಗ್ಗೆ ಮಾನ್ಯ ರಾಮದೇವ್ ರವರು ಆಕ್ಷೇಪಣೆ ಮಾಡಿದ್ದಾರೆ, ನಾವು ಕೆಳಗಿನ ತರಗತಿಯವರಿಗೇನು ಹೆಚ್ಚು ಮಾಡಿಲ್ಲ. ೧.೬೦ ಪೈಸೆವರೆಗೆ ಏನು ಹೆಚ್ಚಳ ಇಲ್ಲ. ೩.೫೦ ಪೈಸೆಗೆ ೧೦ ಪೈಸೆ ಜಾಸ್ತಿ ಮಾಡಿದ್ದೇವೆ. It is quite a modest levy. ೫.೨೦ ಪೈಸೆಗೆ ೮೦ ಪೈಸೆ ಜಾಸ್ತಿಯಾಗಿದೆ. People who are sitting in the balcony have to pay more. ೧.೬೦ ಪೈಸೆಯವರಿಗೆ ಏನು ಜಾಸ್ತಿ ಮಾಡಿಲ್ಲ. We have taken lot of care while imposing the tax. ಏಕೆಂದರೆ, our aim is that the common man should not be taxed more in any sector. ಆದುದರಿಂದ ಈ ಮನರಂಜನೆ ತೆರಿಗೆಯ ಬಗ್ಗೆ ಸರಿಯಾಗಿ ತಿಳಿದುಕೊಂಡಿದ್ದರೆ ಈ ಮಾತು ಆಡುತ್ತಿರಲಿಲ್ಲ. On the other hand you must compliment us for our concessions to the people.

ಶ್ರೀ ಪಿ. ರಾಮದೇವ್.—ನನಗೆ ಜಾಸ್ತಿ ಬಿತ್ತು.

ಶ್ರೀ ಮೈಬೇಲ್ ಬಿ. ಫರ್ನಾಂಡೀಸ್.—೧.೬೦ರಲ್ಲಿ ಸೀಟುಗಳು ಬಹಳ ಕಡಿಮೆ ಇರುತ್ತವೆ. ಬಾಲ್ಕನಿಗೆ ಅನೇಕ ಬಾರಿ ಕ್ಯೂ ಇರುವುದಿಲ್ಲ : ಟಿಕೆಟ್‌ಗಳು ಇರುತ್ತವೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಪಟೇಲರು ೪–೫ ಷೋಗಳನ್ನು ಮಾಡುತ್ತಾರೆಂದರು. ಅದನ್ನು ಮನಗಂಡೇ ೧–೮–೮೧ರಲ್ಲಿ ೪ ಷೋಗಳಿಗಿಂತ ಜಾಸ್ತಿ ಮಾಡಬಾರದೆಂದು ನೋಟಿಫಿಕೇಷನ್ ಇಶ್ಯೂ ಮಾಡಿದ್ದೇವೆ. ಆ ಬಗ್ಗೆ ಕೆಲವು ಥಿಯೇಟರಿನವರು ಹೈಕೋರ್ಟಿಗೆ ಹೋಗಿ ಸ್ಟೇ ತೆಗೆದು ಕೊಂಡಿದ್ದಾರೆ.

ಶ್ರೀ ಜೆ. ಹೆಚ್. ಪಟೇಲ್.—ಕೋರ್ಟು ಸ್ಟೇ ಕೊಟ್ಟಿರಬೇಕಾದರೆ ಕಾನೂನಿನಲ್ಲಿ ಏನೊ ತೊಡಕು ಇರಬೇಕು.

SRI M. VEERAPPA MOILY.—We do not know the reasons for granting stay though they are reasonable restrictions. ಆದುದರಿಂದ ಶ್ರೀಮಂತರ ಮೇಲೆ ಸ್ವಲ್ಪ ಕಣ್ಣು ಹಾಕಿದೆವು. ಬಡವರ ಮೇಲೆ ಎಲ್ಲೂ ಕೂಡ ಕಣ್ಣು ಹಾಕಿಲ್ಲ. ಬಡವರ ಮೇಲೆ ಕಣ್ಣು ಹಾಕುವಂತಹ ಅಭ್ಯಾಸ ನಮಗೆ ಇಲ್ಲ, ಹಾಗುವುದೂ ಇಲ್ಲ. ಕೊಡುವ ಶಕ್ತಿಯುಳ್ಳವರ ಮೇಲೆ ಮಾತ್ರ ಕಣ್ಣು ಹಾಕುತ್ತೇವೆ. ನಾನು ಹೇಳಿದಂತೆ ಈ ಟ್ಯಾಕ್ಷೇಷನ್ ಪ್ರೊಪೋಸಲ್ ಏನಿದೆ they are very reasonable. Further it may only affect mostly the rich and affluent class and not commom man or the middle class people. Therefore, I should say that these are most reasonable tax proposals ever imposed in the history of Karnataka. ಆದುದರಿಂದ ಎಲ್ಲರೂ ಕೂಡ ಯಾವ ತರಹದ ಆಕ್ಷೇಪಣೆಯನ್ನು ಮಾಡದೆ ಇದಕ್ಕೆ ತಮ್ಮ ಸಂಪೂರ್ಣ ಒಪ್ಪಿಗೆ ನೀಡಬೇಕೆಂದು ತಮ್ಮ ಮುಖಾಂತರ ಸದನದ ಎಲ್ಲ ಸದಸ್ಯರನ್ನು ಕೇಳಿಕೊಳ್ಳುತ್ತೇನೆ.

MR. DEPUTY SPEAKER.—I will now put consideration motion to the vote of the House. The question is,

"That the Karnataka Taxation and Certain other Laws (Amendment) Bill, 1982 be taken into consideration"

The Motion was adopted

CLAUSE-2

MR. DEPUTY SPEAKER.—There is an amendment given notice of by the Honble Minister for Finance. I request the Hon'ble Minister for Finance to move the amendment.

SRI M. VEERAPPA MOILY.—Mr. Deputy Speaker, Sir, I beg to move the following amendment to Clause-2.

In sub-item(a) of item (19), for the words and figures "reupees 250 per piece". the words and figures "rupees 500 per piece" shall be substituted.

The question was proposed

ಶ್ರೀ ಎಂ ವೀರಪ್ಪ ಮೊಯಿಲಿ.—ಶ್ರೀಸಾಮಾನ್ಯರಿಗೆ ರಿಯಾಯಿತಿ ಕೊಡುವ ಸಲುವಾಗಿ ೨೫೦ ರೂಪಾಯಿ ಬೆಲೆ ಬಾಳುವ ಮಾಂಗಲ್ಯಕ್ಕೆ ಬದಲಾಗಿ ೫೦೦ ರೂಪಾಯಿಗೆ ಹೆಚ್ಚು ಬೆಲೆ ಬಾಳುವುದಕ್ಕೆ ಮಾತ್ರ ತೆರಿಗೆ ವಿಧಿಸಬೇಕೆಂದು ಮಾಡಿದ್ದೇವೆ. ಇದಕ್ಕೆ ಮಾನ್ಯ ಸಭೆ ಒಪ್ಪಿಗೆ ನೀಡಬೇಕೆಂದು ಕೇಳಿ ಕೊಳ್ಳುತ್ತೇನೆ.

MR. DEPUTY SPEAKER.—I will now put to the vote of the House the amendment moved by the Hon'ble Finance Minister. The question,

"In sub-item (a) of item (19), for the words and figures 'rupees 250 per piece', the words and figures 'rupees 500 per piece', shall be substituted"

The motion was adopted

I will now put Clause-2 as amended to the vote of the House. The question is :

"That Clause-2 as amended do stand part of the Bill"

The motion was adopted

Clause 2 as amended was added to the Bill.

CLAUSES-3 TO 6

MR. DEPUTY SPEAKER.—As there are no amendments I will put Caluses 3 to 6 to the vote of the House. The question is :

"Clauses 3 to 6, both inclusive do stand part of the Bill"

The Motion was adopted.

Clause 3 to 6 both inclusive were added to the Bill

CLAUSE-7

MR. DEPUTY SPEAKER.—Now, there is an amendment to Clause 7 given notice of by the Hon'ble Finance Minister. I request the Hon'ble Finance Minister to move the amendment.

SRI M. VEERAPPA MOILY.—Sir, I beg to move an amendment to Clause-7

"In item (15), item 11 and the entries thereof proposed to be inserted in the Schedule shall be omitted and items 12,13,14,15,16 and 17 shall be renumbered as items 11,12, 13,14,15 and 16 respectively"

question was proposed

MR. DEPUTY SPEAKER.—I will now put to the vote of the House the amendment moved by the Hon'ble Finance Minister. The question is :

"In item (15), item 11 and the entries thereof proposed to be inserted in the schedule shall be omitted and items 12, 13, 14, 15, 16 and 17 shall be renumbered as items 11, 12, 13, 14, 15 and 16 respectively".

The Motion was adopted

MR. DEPUTY SPEAKER.—I will now put to the vote of the House Clause-7 as amended. The question is,

"That Clause-7 as amended do stand part of the Bill"

The Motion was adopted

Clause 7 as amended was added to the Bill

CLAUSE 1 ETC.,

MR. DEEUTY SPEAKER.—The question is,

"That Clause 1, the Long Title, the Preamble and the Enacting Formula do stand part of the Bill."

The Motion was adopted.

Clause 1, the Long Title, the Preamble, and the Enacting Formula were added to the Bill.

MOTION TO PASS

SRI M. VEERAPPA MOILY.—Sir, I move :

"That the Karnataka Taxation and certain other Laws (Amendment) Bill, 1982".

MR. DEPUTY SPEAKER.—The question is ;

"That the Karnataka Taxation and Certain Other Laws (Amendment) Bill, 1982, as amended be passed·"

The Motion was adopted and the Bill was passed.

THE KARNATAKA TAX ON LUXURIES (HOTELS AND LODGING HOUSES) (AMENDMENT) BILL, 1982.

MOTION TO CONSIDER

SRI M. VEERAPPA MOILY.—I move :

"That the Karnataka Tax on Luxuries(hotels and Lodging Houses) (Amendment) Bill, 1982' be taken into consideration".

The question was proposed.

SRI M. VEERAPPA MOILY.—Sir. it is a very simple Bill the minimum limit of tax on lodging charges has been extended from Rs. 20 to 25 becauee it is supposed to be a luxury tax. ೨೦ ರೂಪಾಯಿ ಎಂದರೆ ಈಗಿನ ಬೆಲೆಯಲ್ಲಿ ಲಗ್ಜುರಿಯಾಗುವುದಿಲ್ಲ. ಆದ್ದರಿಂದ ಕನಿಷ್ಠ ೨೦ ರೂಪಾಯಿ ಎಂಬುದನ್ನು ೨೫ ರೂಪಾಯಿಗೆ ಏರಿಸಬೇಕು ಎಂದು ಎಲ್ಲರೂ ಹೇಳಿದ್ದರು.

ಶ್ರೀ ಪಿ. ರಾಮದೇವ್.—ಬೆಂಗಳೂರು ನಗರದ ಪರಿಸ್ಥಿತಿಯನ್ನು ನೋಡಿದರೆ ೨೫ ರೂಪಾಯಿ ಬಹಳ ಕಡಿಮೆ. ಅದನ್ನು ೫೦ಕ್ಕೆ ಏರಿಸಬೇಕು. ೫೦ ರೂಪಾಯಿಯವರೆಗೆ ವಿನಾಯಿತಿ ಕೊಡಬೇಕು. ಬೆಂಗಳೂರು ನಗರದಲ್ಲಿರುವ ಬೆಲೆ ನೋಡಿದರೆ ೨೫ ರೂಪಾಯಿಗೆ ಏನೂ ಸಿಗುವುದಿಲ್ಲ ಎಲ್ಲಾ ಬೆಲೆಗಳನ್ನು ಜಾಸ್ತಿ ಮಾಡಿದ್ದಾರೆ. ಆ ದೃಷ್ಟಿಯಿಂದ ೫೦ ರೂಪಾಯಿಗೆ ಏರಿಸಿದರೆ ಒಳ್ಳೆಯದು.

ಶ್ರೀ ಪೆಚ್. ಗಂಗಾಧರನ್.—ತೆರಿಗೆಯನ್ನು ಯಾರು ಕೊಡಬೇಕು ? Whatever it is paid to the hotelier, it will be collected.

SRI A. LAKSHMISAGAR.—Sir. largest number of hotels are situated is my constituency i.e., Gandhi Nagar and other surrounding areas. In almost all lodges rooms are always full. In other words, there will be no vacancy. I am very much acquianted with the people who come from outside and reside in lodges. Therefore, I only appeal to you that the minimum limit should be raised. It should be increased to Rs. 50. if it is not possible, at least you make it Rs. 40. Otherwise, it will not serve the purpose. ನೀವು ಈಗ ಮಾಡದೆ ಆ ಮೇಲೆ ನೋಡೋಣ ಎಂದರೆ ಸುಮ್ಮನೆ ಅವರು ಬರುವುದು. ಮಧ್ಯೆ ವ್ಯವಹಾರಗಳು ನಡೆಯುವುದು. ಇದೆಲ್ಲಾ ಆಗುತ್ತದೆ. ನಿಮಗೆ ಕೆಟ್ಟ ಹೆಸರು ಬರುತ್ತದೆ. ಆದ್ದರಿಂದ ನೀವು ಏತಕ್ಕೆ ಆಪಾದನೆಗೆ ಗುರಿಯಾಗುತ್ತೀರಿ ಎಂದು ಹೇಳುತ್ತಿದ್ದೇನೆ. ಎಷ್ಟೋ ಜನ ಬಾಡಿಗೆಗೆ ತೆಗೆದುಕೊಂಡು ಹೋಟೆಲ್ ನಡೆಸುತ್ತಿರುತ್ತಾರೆ. ಕಟ್ಟಿಸಿರುವವನು ಎಲ್ಲೋ ಇರುತ್ತಾನೆ.

ಶ್ರೀ ಆರ್ ಗುಂಡೂರಾವ್.—೩೦ ರೂಪಾಯಿಗೆ ಏರಿಸಬಹುದು.

ಶ್ರೀ ಎ. ಲಕ್ಷ್ಮೀಸಾಗರ್.—ಅಷ್ಟಾದರೂ ಮಾಡಿ.